ಮೇಲೆ ಕೈಯಿಟ್ಟುಕೊಂಡು ನಿಂತುಕೊಳ್ಳುತ್ತಿದ್ದ. ಆತ ಕಪ್ಪು ಮೈಬಣ್ಣದ ಕುಳ್ಳನೆಯ ವ್ಯಕ್ತಿ. ಸೋಮಾರಿ; ನಡೆಯುವಾಗ ತುಂಬಾ ನಿಧಾನ; ಆಯಾಸಗೊಂಡವನಂತೆ ಆಗಾಗ ನಿಲ್ಲುತ್ತಿದ್ದ; ನಡೆಯುವಾಗ ಅವನ ಕೈಗಳು ಅಲುಗಾಡುತ್ತಿರಲಿಲ್ಲ... ಬಹಳ ಕಡಿಮೆ ಮಾತನಾಡುತ್ತಿದ್ದ. ತನ್ನ ಬಹುಪಾಲು ಕೆಲಸಗಳನ್ನು ಕಣ್ಣುಗಳಿಂದಲೇ ಮಾಡಿ ಮುಗಿಸುತ್ತಿದ್ದ; ಕಣ್ಣುಗಳಿಂದಲೇ ಗೋದಾಮಿನ ಪರಿಸ್ಥಿತಿಯನ್ನು ಅಳೆಯುತ್ತಿದ್ದ; ಕಣ್ಣುಗಳಿಂದಲೇ ಅಲ್ಲಿದ್ದ ಸಿಮೆಂಟ್ ಚೀಲಗಳನ್ನು ಎಣಿಸುತ್ತಿದ್ದ; ಕಣ್ಣುಗಳಿಂದಲೇ ತನ್ನ ಕೆಲಸಗಾರರನ್ನು ಗದರಿಸುತ್ತಿದ್ದ, ಹಿಡಿತದಲ್ಲಿ ಇಟ್ಟುಕೊಳ್ಳುತ್ತಿದ್ದ; ಆತ ತನ್ನ ಸಹಾಯಕರನ್ನು ಕರೆಯುತ್ತಿದ್ದುದು, ಕಳುಹಿಸುತ್ತಿದ್ದುದು ಎಲ್ಲವೂ ಕಣ್ಣುಗಳ ಸನ್ನೆಯಿಂದಲೇ; ಯಾರೂ ಆತನ ಎದುರಿನಲ್ಲಿ ನಿಂತು, ಕಣ್ಣಿಗೆ ಕಣ್ಣು ಕೊಟ್ಟು ಮಾತನಾಡುತ್ತಿರಲಿಲ್ಲ. ಕಣ್ಣುಗಳು ಆತನ ಪ್ರಬಲ ಅಸ್ತ್ರಗಳೇ ಆಗಿದ್ದವು.

ಅರವತ್ತು ದಾಟಿದ ಮುದುಕನೊಬ್ಬ ಆ ಗುತ್ತಿಗೆದಾರನಿಗೆ ಸಹಾಯಕ. ಆತ ಜೊಜೊಹಾತು ಹಳ್ಳಿಯವನೇ. ಬುಂಡು ಕೋರಾ ಆತನ ಪೂರ್ಣ ಹೆಸರು. ಕಾಡಿನ ಜೀವಿ, ಆದಿವಾಸಿ. ಆತನ ವರ್ತನೆ ಬಳಲಿದವನ ರೀತಿಯಲ್ಲಿಯೇ ಇರುತ್ತಿತ್ತು; ಯಾವುದೋ ಕಠಿಣವಾದ ಕೆಲಸವನ್ನು ಈಗಷ್ಟೇ ಮುಗಿಸಿ ಬಂದವನ ಹಾಗೆ. ಎಣ್ಣೆ ಕಾಣದ ಆತನ ತಲೆಗೂದಲುಗಳು ಭುಜವನ್ನು ಸ್ಪರ್ಶಿಸುತ್ತಿದ್ದವು; ಗಡ್ಡ, ಮೀಸೆ ಕ್ಷೌರವನ್ನೇ ಕಂಡಿಲ್ಲವೇನೋ ಎನ್ನುವ ಹಾಗೆ ಅಡ್ಡಾದಿಡ್ಡಿ ಬೆಳೆದಿದ್ದವು. ಕೂದಲುಗಳ ನಡುವಿನಿಂದ ಇಳಿಯುತ್ತಿದ್ದ ಬೆವರು, ಅವುಗಳ ಬಿಳಿಯ ಬಣ್ಣಕ್ಕೆ ಇನ್ನಷ್ಟು ಹೊಳಪು ನೀಡಿತ್ತು. ಆತ ಬಾಯಿ ತೆರೆಯುವುದಕ್ಕೆ ಮೊದಲೇ ದಾಳಿ ಮಾಡುವ ವಾಸನೆ; ಅನುಮಾನವೇ ಬೇಡ, ತಾಳೆ ಮರದ ಹೆಂಡದ ವಾಸನೆ, ಆ ಕಾರಣಕ್ಕಾಗಿಯೇ ಏನೋ, ಗುತ್ತಿಗೆದಾರ ಆತನಿಂದ ಒಂದಿಷ್ಟು ಅಂತರವನ್ನು ಕಾಯ್ದುಕೊಳ್ಳುತ್ತಿದ್ದ.

"ಗೋದಾಮಿನಲ್ಲಿರುವ ಚೀಲಗಳನ್ನು ಎಣಿಸುವ ಅವಶ್ಯಕತೆಯಿಲ್ಲ; ಅದು ಸಮಯ ನಷ್ಟ ಅಷ್ಟೇ; ಈ ಕಾಡಿನಲ್ಲಿ ಯಾವತ್ತೂ ಕಳ್ಳತನವಾಗಿಲ್ಲ; ಇಲ್ಲಿನ ತಾಂಡಾದಲ್ಲಿ ಯಾರೂ ಕಳ್ಳರಿಲ್ಲ; ಬೇರೆಯವರು ಬಂದು ಕಳ್ಳತನ ಮಾಡುವುದಕ್ಕೆ ನಮ್ಮ ಜನ ಬಿಡಲ್ಲ. ನಾವು ಆದಿವಾಸಿಗಳು; ಬಲು ನಿಯತ್ತಿನವರು..."

ಗುತ್ತಿಗೆದಾರನಿಗೆ ಆದಿವಾಸಿಗಳ ಬಗ್ಗೆ ಚೆನ್ನಾಗಿ ತಿಳಿದಿತ್ತು. ಅವರು ಒಂದು ಹೊತ್ತು ಉಪವಾಸವಿರುವುದಕ್ಕೆ ಸಿದ್ಧರಿರುತ್ತಾರೆಯೇ ವಿನಃ ಇನ್ನೊಬ್ಬರ ಸಂಪಾದನೆಯ ಮೇಲೆ ಕಣ್ಣುಹಾಕುವುದಿಲ್ಲ. ಜೊಜೊಹಾತುವಿನಲ್ಲಿ ಕಳ್ಳತನ ನಡೆದ ಬಗ್ಗೆ ಆತ ಈ ಮೊದಲು ಯಾವತ್ತೂ ಕೇಳಿಲ್ಲ. ಗೋದಾಮಿನಲ್ಲಿನ ಸಿಮೆಂಟ್ ಚೀಲಗಳ ಎಣಿಕೆಯನ್ನು ಆತ ಇತ್ತೀಚೆಗೆ ಕೈಬಿಟ್ಟಿದ್ದ. ಬುಂಡುವಿಗೆ ಗೋದಾಮಿನ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಬಿಟ್ಟಿದ್ದ. ಗೊದಾಮು ಈಗ ಬುಂಡುವಿನ ಸುಪರ್ದಿಯಲ್ಲಿತ್ತು.

ಜೊಜೊಹಾತುವಿನಲ್ಲಿ ಒಂದೇ ಒಂದು ಅಂಗಡಿಯಿತ್ತು. ಎಣ್ಣೆ, ಅಕ್ಕಿ, ಬೇಳೆಕಾಳು, ಕಟ್ಟಿಗೆ ಎಲ್ಲವೂ. ಆ ಹಳ್ಳಿಯಲ್ಲಿನ ಎಲ್ಲ ಆದಿವಾಸಿ ಕುಟುಂಬಗಳಿಗೆ ಅದೊಂದು ಜೀವನಾಧಾರ ತಾಣ. ಇತ್ತೀಚೆಗೆ ಆ ಅಂಗಡಿಗೆ ಒಬ್ಬ ಸರ್ಕಾರಿ ಅಧಿಕಾರಿ ವಾರದಲ್ಲಿ ಎರಡು–ಮೂರು ಬಾರಿ ಬರಲು ಶುರುಮಾಡಿದ್ದ; ಕೆಲವೊಮ್ಮೆ ನಾಲ್ಕು ಬಾರಿ. ಆ ಅಂಗಡಿಯವನು ಕಾಡು ಜನರಿಗೆ, ಆದಿವಾಸಿಗಳಿಗೆ ಬಟ್ಟೆಗಳನ್ನು ಪೂರೈಸಬೇಕಾಗಿತ್ತು ಮತ್ತು ಅವುಗಳ ಮೌಲ್ಯವನ್ನು ಈ ಸರ್ಕಾರಿ ಅಧಿಕಾರಿ ಅಂಗಡಿಯವನಿಗೆ ಸಂದಾಯ ಮಾಡುತ್ತಿದ್ದ. ಹಣ ನೀಡುವ ಸಂದರ್ಭದಲ್ಲಿ ಆ ಅಧಿಕಾರಿ ಅಂಗಡಿಯವನಿಗೆ ಆ ದಿನ ಹೇಳಿದ್ದ,

"ಆದಿವಾಸಿಗಳಿಗೆ ನೀನು ಹಂಚುವ ಎಲ್ಲ ಬಟ್ಟೆಗಳಿಗೆ ಪಕ್ಕಾ ಲೆಕ್ಕ ಇಡಬೇಕು. ಅವುಗಳ ಸಂಪೂರ್ಣ ಬೆಲೆಯನ್ನು ಸರ್ಕಾರ ಕೊಡುತ್ತದೆ. ಆದರೆ, ಒಂದು ವೇಳೆ, ಬಟ್ಟೆ ಇಲ್ಲದ, ಹರಕು ಬಟ್ಟೆಗಳನ್ನು ಧರಿಸಿದ